

ಮಂಜುನಾಥ ಹುಲಕೊಪ್ಪದ

# ಗಿಲಕಿ

ಗಿಲ್ಗಿಲ್ ಗಿಲ್ ಗಿಲಕಿ
ಕೈಯ್ಯಲಿ ಆಡಿಸೊ ಗಿಲಕಿ
ಮಕ್ಕಳ ಕುಣಿಸೊ ಗಿಲಕಿ
ಚಿಣ್ಣರ ಆಟಿಕೆ ಗಿಲಕಿ

ಗಿಲ್ಗಿಲ್ ಗಿಲ್ ಗಿಲಕಿ
ಕಂದಗೆ ಕೊಡಿ ಆಡೋಕೆ
ಆಡಿ ನಕ್ಕು ನಲಿಯೋಕೆ
ನಕ್ಕು ಅಳು ಮರೆಯೋಕೆ

ಸಂತೆಯಲ್ಲಿ ಹುಡುಕಮ್ಮ
ಜಾತ್ರೆಗೆ ಹೋಗಿ ತಾರಮ್ಮ
ಬಣ್ಣ ಚೆಂದಾಗಿ ಇರಲಮ್ಮ
ಹಳದಿ ಕೆಂಪು ಸೊಗಸಮ್ಮ

ಚನ್ನಪಟ್ಟಣದ ಗಿಲಕಿ
ಮೈಸೂರಿನ ಪಕ್ಕದಾಕಿ
ಮರದ ಹಗುರ ಗಿಲಕಿ
ಗಿಲಗಿಲ ಸದ್ದಿನ ಗಿಲಕಿ

ಅನ್ನ ಹಾಲು ಬೇಡಮ್ಮ
ಸಣ್ಣ ತಮ್ಮಗೂ ನೀಡಮ್ಮ
ಚೆನಾದ ಗಿಲಕಿ ದೂಡಮ್ಮ
ಪ್ಲಾಸ್ಟಿಕ್ ದಾದ್ರೆಎಸೆಯಮ್ಮ

ಆಡಿಸುವೆ ನಾನು ಗಿಲಕಿ
ಕುಣಿವೆ ತಮ್ಮನ ಜೊತೆಗೆ
ಮಲಗುವೆ ಹೊಡಿದೆ ಗೊರಕಿ
ಕೊಟ್ಟರೆ ಬಣ್ಣದ ಗಿಲಕಿ

■ ಎಂ.ಡಿ. ಚಂದ್ರೇಗೌಡ
ನಾರಮ್ನಳ್ಳಿ

## ಕುಂಚ ಪ್ರಪಂಚ



**ಚರಿ ಸಚಿನ್**
4 ವರ್ಷ
ಬೆಂಗಳೂರು







**ಪ್ರೀತಮ್ ಜೆ.**
6ನೇ ತರಗತಿ, ಗುಡ್ ಹೋಪ್ ಇಂಗ್ಲಿಷ್ ಸ್ಕೂಲ್
ಬೆಂಗಳೂರು





**ಅದಿತಿ ಎಂ. ಕೃಷ್ಣ**
8ನೇ ತರಗತಿ
ಶ್ರೀ ಕುಮಾರನ್ಸ್ ಅಕಾಡೆಮಿ ಬೆಂಗಳೂರು